# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 267 |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 18-08-2026 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಗೌಡಗೆರೆ ಮತ್ತು ಹುಳಿಯಾರು ಹೋಬಳಿಯಲ್ಲಿ ಎಷ್ಟು ಹೆಕ್ಟೇರ್ ಗಳಲ್ಲಿ ಮಳೆಯಾಧಾರಿತ ಬೆಳೆ ಬೆಳೆಯಲಾಗುತ್ತದೆ; ಬೆಳೆಯುವ ಬೆಳೆಗಳು ಯಾವುವು; | ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಗೌಡಗೆರೆ ಹೋಬಳಿಯಲ್ಲಿ ಮಳೆಯಾಧಾರಿತ ಬೆಳೆಗಳ ವಿಸ್ತೀರ್ಣವು 12500 ಹೆಕ್ಟೇರ್ ಇರುತ್ತದೆ. ಮಳೆಯಾಧಾರಿತ ಬೆಳೆಗಳಾದ ಶೇಂಗಾ, ರಾಗಿ, ಮುಸುಕಿನಜೋಳ, ತೊಗರಿ, ಅವರೆ, ಅಲಸಂದೆ, ಹುರುಳಿ, ಹತ್ತಿ ಮತ್ತು ಸಿರಿಧಾನ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ.<br><br>ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿಯಲ್ಲಿ ಮಳೆಯಾಧಾರಿತ ಬೆಳೆಗಳ ವಿಸ್ತೀರ್ಣವು 14577 ಹೆಕ್ಟೇರ್ ಇರುತ್ತದೆ. ಮಳೆಯಾಧಾರಿತ ಬೆಳೆಗಳಾದ ರಾಗಿ, ಮೇವಿನಜೋಳ, ತೊಗರಿ, ಅವರೆ, ಅಲಸಂದೆ, ಹುರುಳಿ, ಉದ್ದು, ಶೇಂಗಾ, ಹೆಸರು, ಎಳ್ಳು, ಹರಳು, ಹುಚ್ಚೆಳ್ಳು ಮತ್ತು ಸಾವೆ ಬೆಳೆಗಳನ್ನು ಬೆಳೆಯಲಾಗುತ್ತದೆ. |
| ಆ) | ಸದರಿ ಹೋಬಳಿಗಳಲ್ಲಿ ಬಿತ್ತನೆ ಬೀಜ ಮತ್ತು ಗೊಬ್ಬರ ವಿತರಣೆ ಮಾಡಿದ ಸಂಪೂರ್ಣ ವಿವರ ನೀಡುವುದು; | ಗೌಡಗೆರೆ ಮತ್ತು ಹುಳಿಯಾರು ಹೋಬಳಿಯಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳ ವಿತರಣೆ ವಿವರ ಈ ಕೆಳಕಂಡಂತಿದೆ. |

ಪ್ರಮಾಣ (ಕ್ವಿಂ. ಗಳಲ್ಲಿ)

| ಕ್ರ.ಸಂ. | ಬೆಳೆಗಳು | ಗೌಡಗೆರೆ | ಹುಳಿಯಾರು |
|---|---|---|---|
| 1 | ರಾಗಿ | 19.05 | 98.2 |
| 2 | ಮ.ಜೋಳ | 10.68 | 0 |
| 3 | ಹೆಸರು | 0 | 2.35 |
| 4 | ಉದ್ದು | 0 | 0.20 |
| 5 | ತೊಗರಿ | 9.95 | 3.55 |
| 6 | ಅಲಸಂದೆ | 0.60 | 2.15 |
| 7 | ಶೇಂಗಾ | 90.30 | 0 |
| | **ಒಟ್ಟು** | **130.58** | **106.45** |

ಗೌಡಗೆರೆ ಮತ್ತು ಹುಳಿಯಾರು ಹೋಬಳಿಗಳಲ್ಲಿ ವಿತರಣೆ ಮಾಡಿದ ಗೊಬ್ಬರದ ವಿವರ ಕೆಳಗಿನಂತಿದೆ.

(ಪ್ರಮಾಣ- ಮೆ.ಟನ್ ಗಳಲ್ಲಿ)

| **ರಸಗೊಬ್ಬರದ ವಿಧ** | **ಗೌಡಗೆರೆ ಹೋಬಳಿ** | **ಹುಳಿಯಾರು ಹೋಬಳಿ** |
|---|---|---|
| ಯೂರಿಯಾ | 95.75 | 540 |
| ಡಿ.ಎ.ಪಿ | 48.65 | 125 |
| ಎಮ್.ಒ.ಪಿ | 20.05 | 54.10 |
| ಕಾಂಪ್ಲೆಕ್ಸ್ | 395.25 | 854 |
| ಎಸ್.ಎಸ್.ಪಿ(ಇತರೆ)- | 13.35 | 3.33 |

ಇ) ಬಿತ್ತನೆಯಾದ ಪ್ರದೇಶದ ವಿಸ್ತೀರ್ಣವೆಷ್ಟು; ಮಳೆಯ ಅಭಾವದಿಂದ ಬಿತ್ತನೆ ಕಾರ್ಯ ನಡೆಯದ ಪ್ರದೇಶದ ವಿಸ್ತೀರ್ಣವೆಷ್ಟು; ಬಿತ್ತನೆ ಮಾಡಿ ಬೆಳೆ ಬರದ ಪ್ರದೇಶದ ವಿಸ್ತೀರ್ಣವೆಷ್ಟು;

ಹೋಬಳಿವಾರು ಬಿತ್ತನೆಯಾದ, ಬಿತ್ತನೆಯಾಗದ ಹಾಗೂ ಬಿತ್ತನೆ ಮಾಡಿ ಬೆಳೆ ಬರದ ಪ್ರದೇಶದ ವಿಸ್ತೀರ್ಣದ ವಿವರ ಈ ಕೆಳಕಂಡಂತಿದೆ.

(ವಿಸ್ತೀರ್ಣ ಹೆ.ಗಳಲ್ಲಿ)

| **ಹೋಬಳಿ** | **ಬಿತ್ತನೆಯಾದ ಪ್ರದೇಶ** | **ಬಿತ್ತನೆಯಾಗದ ಪ್ರದೇಶ** | **ಬಿತ್ತನೆ ಮಾಡಿದ ಜಾಗದಲ್ಲಿ ಬೆಳೆ ಬಾರದ ಪ್ರದೇಶ** |
|---|---|---|---|
| ಗೌಡಗೆರೆ | 1165 | 11335 | 1165 |
| ಹುಳಿಯಾರು | 941 | 13636 | 941 |

ಈ) ಶಿರಾ ತಾಲ್ಲೂಕಿನಲ್ಲಿ ಎಷ್ಟು ರೈತರು ವಿಮಾ ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ; ನೋಂದಾಯಿಸಿಕೊಂಡ ರೈತರಿಗೆ ನೀಡುವ ಪರಿಹಾರವೆಷ್ಟು; (ಬೆಳೆವಾರು, ಹೆಕ್ಟೇರ್ ವಾರು ವಿವರ ನೀಡುವುದು);

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಅಧಿಸೂಚಿತವಾಗಿರುವ ಬೆಳೆಗಳಿಗೆ ಇಲ್ಲಿಯವರೆಗೆ ಒಟ್ಟು 10,615 ರೈತರು, 7,613 ಹೆಕ್ಟೇರ್ ವಿಸ್ತೀರ್ಣಕ್ಕೆ ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದಾರೆ. ಬೆಳೆ ವಿಮೆ ನೋಂದಣಿ ಪ್ರಕ್ರಿಯೆ ಹಾಗೂ ಸಂಬಂಧಿತ ದತ್ತಾಂಶಗಳ ಹೊಂದಾಣಿಕೆ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ.

ಬೆಳೆವಾರು ಮತ್ತು ಹೆಕ್ಟೇರ್‌ವಾರು ನೋಂದಣಿ ವಿವರ ಈ ಕೆಳಕಂಡಂತಿದೆ.

| **ಬೆಳೆ** | **ನೋಂದಣಿಯಾದ ರೈತರ ಸಂಖ್ಯೆ** | **ವಿಸ್ತೀರ್ಣ (ಹೆ. ಗಳಲ್ಲಿ)** |
|---|---|---|
| ಹತ್ತಿ (ನೀ.) | 17 | 9 |
| ಹತ್ತಿ (ಮ.ಆ) | 9 | 6 |
| ಶೇಂಗಾ (ನೀ.) | 8 | 8 |
| ಶೇಂಗಾ (ಮ.ಆ) | 7624 | 5868 |
| ಹುರುಳಿ (ಮ.ಆ) | 120 | 75 |
| ಈರುಳ್ಳಿ (ನೀ.) | 41 | 21 |
| ತೊಗರಿ (ಮ.ಆ) | 776 | 601 |
| ರಾಗಿ (ನೀ.) | 27 | 14 |
| ರಾಗಿ (ಮ.ಆ) | 1993 | 1011 |
| **ಒಟ್ಟು** | **10615** | **7613** |

ಸದರಿ ಯೋಜನೆಯಡಿ ನೋಂದಾಯಿಸಿಕೊಂಡ ರೈತರಿಗೆ ಪ್ರಕೃತಿ ವಿಕೋಪದಿಂದ ಬೆಳೆ ನಷ್ಟವಾದರೆ, PMFBY ಮಾರ್ಗಸೂಚಿ-2023ರನ್ವಯ ವಿಮಾ ಪರಿಹಾರ ನೀಡಲು ಈ ಕೆಳಕಂಡಂತೆ ಅವಕಾಶವಿರುತ್ತದೆ.

- Prevented Sowing/Planting: ಬೆಳೆ ಬಿತ್ತನೆ/ ನಾಟಿ ಪೂರ್ಣವಾಗಿ ವಿಫಲಗೊಂಡಲ್ಲಿ.
- Mid-Season Adversity: ಬಿತ್ತನೆಯ ನಂತರ ಕಟಾವಿಗೆ ಮುನ್ನ ಹವಾಮಾನ ವೈಪರೀತ್ಯದಿಂದ ಬೆಳೆ ಹಾನಿಯಾದರೆ ಮಧ್ಯಂತರ ವಿಮಾ ಪರಿಹಾರ.
- Localised Calamity: ಸ್ಥಳ ನಿರ್ಧಿಷ್ಟ ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದರೆ.
- Post-Harvest Loss: ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೇ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ.

ಅಂತಿಮವಾಗಿ ವಿಮಾ ಘಟಕದ ಇಳುವರಿಯ ಶೇಕಡವಾರು ಕೊರತೆಗನುಗುಣವಾಗಿ ಬೆಳೆ ವಿಮೆಗೆ ನೊಂದಾಯಿಸಿದ ಅರ್ಹ ರೈತರಿಗೆ ಬೆಳೆ ವಿಮಾ ಪರಿಹಾರವನ್ನು ಮಂಜೂರು ಮಾಡಲಾಗುತ್ತದೆ.

| | | |
|---|---|---|
| | | ಪ್ರಕೃತಿ ವಿಕೋಪಗಳಿಂದ ಯಾವುದೇ ಅಧಿಸೂಚಿತ ಬೆಳೆ ವಿಫಲಗೊಂಡಲ್ಲಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಿದ ನಂತರ ಪಾವತಿಯಾದ ವಿಮಾ ಪರಿಹಾರ ಮೊತ್ತವನ್ನು ಒಟ್ಟು ವಿಮಾ ಮೊತ್ತದಲ್ಲಿ ಕಡಿತಗೊಳಿಸಲಾಗುತ್ತದೆ. ಇದೇ ರೀತಿ ವಿವಿಧ ವಿಪತ್ತುಗಳಿಗೆ ಪಾವತಿ ಮಾಡುವ ವಿಮಾ ಪರಿಹಾರ ಮೊತ್ತವನ್ನು ಒಟ್ಟು ವಿಮಾ ಮೊತ್ತದಲ್ಲಿ ಕಡಿತಗೊಳಿಸಲಾಗುತ್ತದೆ. ಅಂತಿಮ ಇಳುವರಿ ಆಧಾರಿತ ವಿಮಾ ಪರಿಹಾರ ಮೊತ್ತ ಲೆಕ್ಕಾಚಾರ ಮಾಡುವಾಗ ಇಳುವರಿ ಕೊರತೆಯನ್ನು ಲಭ್ಯವಿರುವ ವಿಮಾ ಮೊತ್ತದೊಂದಿಗೆ ಗುಣಿಸಿ ಲೆಕ್ಕಾಚಾರ ಮಾಡಲಾಗುತ್ತದೆ. |
| ಉ) | ವಿಮಾ ಯೋಜನೆಗೆ ನೋಂದಾಯಿಸಿಕೊಳ್ಳದ ರೈತರಿಗೆ ಸರ್ಕಾರ ನೀಡುವ ಪರಿಹಾರದ ಮೊತ್ತವೆಷ್ಟು? | ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೋಂದಾಯಿಸಿಕೊಳ್ಳದ ರೈತರಿಗೆ ಯೋಜನೆಯ ಮಾರ್ಗಸೂಚಿಯನ್ವಯ ಬೆಳೆ ವಿಮೆ ಪರಿಹಾರ ನೀಡಲು ಅವಕಾಶವಿರುವುದಿಲ್ಲ. |

ಸಂಖ್ಯೆ: AGRI/195/ACT/2026

P. M. Narendraswamy

**(ಪಿ. ಎಂ. ನರೇಂದ್ರ ಸ್ವಾಮಿ)**

ಕೃಷಿ ಸಚಿವರು